ಮೂಲ ದಾವಾ ಸಂಖ್ಯೆ 3/2019

ಪಿ ಡಬ್ಲ್ಯೂ-4

**(ದಿನಾಂಕ 16.06.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ P.J.G. ವಕೀಲರಿಂದಃ-**

ದಾವಾ ಆಸ್ತಿಗಳ ಸರ್ವೆ ನಂಬರ, ವಿಸ್ತೀರ್ಣ, ಚೆಕ್ ಬಂದಿ ನನಗೆ ಗೊತ್ತಿಲ್ಲಾ. ದಾವಾ ಆಸ್ತಿಗಳ ಮಾಲೀಕರು ಯಾರು ಎಂದರೆ ಗೊತ್ತಿಲ್ಲಾ. ದಾವಾ ಆಸ್ತಿಗಳ ಪಹಣಿ ಮತ್ತು ಇತರೆ ದಾಖಲೆಗಳನ್ನು ನಾನು ನೋಡಿಲ್ಲಾ. ಕೇವಲ ಪಾಲು ವಿಭಾಗ ಪತ್ರವನ್ನು ನೋಡಿರುತ್ತೇನೆ. ಪಾಲು ವಿಭಾಗ ಪತ್ರವನ್ನು ನೋಡಿದ್ದೆ ಅಂತಾ ಗೊತ್ತಿಲ್ಲಾ. 1980 ರಲ್ಲಿ ಪಾಲು ವಿಭಾಗ ಆಗಿರುತ್ತದೆ. ಪಾಲು ವಿಭಾಗದ ತಾರೀಖು ತಿಂಗಳು ನಾನು ಹೇಳಿ ಬರೆಸಿಲ್ಲಾ. ಪಾಲು ವಿಭಾಗ ಕೊಟ್ರಯ್ಯ, ಚನ್ನವೀರಮ್ಮ ಸೌಭಾಗ್ಯಮ್ಮ ಕೊಟ್ರಯ್ಯ ರವರ ನಡುವೆ ಆಗಿರುತ್ತದೆ. ಪಾಲು ವಿಭಾಗ ಆದಾಗ ನಾನು ಹಾಜರಿರಲಿಲ್ಲ. ನಮ್ಮ ತಂದೆ ಇದ್ದರು. ಪಾಲು ವಿಭಾಗ ಆಗುವಾಗ ಯಾರು ಯಾರು ಇದ್ದರು ಅಂತಾ ನನಗೆ ಮಾಹಿತಿ ಇಲ್ಲಾ. ಬಿದ್ರಿ ವಿರುಪಾಕ್ಷಪ್ಪ ನನ್ನ ತಂದೆ. ಬಿದ್ರಿ ವಿರುಪಾಕ್ಷಪ್ಪ ಅವರ ಸಹಿ ಇರುವ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲಾ. ಬಿದ್ರಿ ವಿರುಪಾಕ್ಷಪ್ಪ ಅವರ ಸಹಿ ಇರುವ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲಾ ಎಂದರೆ ಸರಿ. ಪಾಲು ವಿಭಾಗ ಪತ್ರದ ಬಗ್ಗೆ ನನಗೆ ಏನು ಗೊತ್ತಿಲ್ಲದೇ ಇದ್ದರೂ ವಾದಿಯರಿಗೆ ಸಹಾಯ ಮಾಡಲು ನಿ ಪಿ 20 ಕ್ಕೆ ನಮ್ಮ ತಂದೆ ಸಹಿ ಮಾಡಿರುತ್ತಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ವಾದಿಯರದ್ದು ಕ್ಯಾರೇಕಟ್ಟೆ ನಮ್ಮದು ಕಂಚಿಕೇರೆ. ನಮ್ಮದು ಬೇರೆ ಊರು ವಾದಿಯರ ಬೇರೆ ಊರು ಆಗಿರುವ ಕಾರಣ ನಮ್ಮ ತಂದೆ ನಿ ಪಿ 20 ಕ್ಕೆ ಸಹಿ ಮಾಡುವ ಅವಕಾಶ ಇರಲಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿ ನೋಡಿರುವುದಿಲ್ಲಾ. ಹೀಗಾಗಿ ಯಾರು ಯಾರು ಯಾವ ಯಾವ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇದ್ದರೆ ಎಂದು ಹೇಳಲು ಆಗುವುದಿಲ್ಲಾ ಎಂದರೆ ಸರಿ. ವಾದಿಯರ ಮಾತಿನ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಧೀಶರು, ಹರಪನಹಳ್ಳಿ.

ಮೂಲ ದಾವಾ ಸಂಖ್ಯೆ 3/2019

ಪಿ ಡಬ್ಲ್ಯೂ-5

**<u>(ದಿನಾಂಕ 16.06.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)</u>**

**<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ P.J.G. ವಕೀಲರಿಂದಃ-</u>**

ದಿನಾಂಕ 01.03.1978 ರಂದು ನಾನು ಹುಟ್ಟಿರುತ್ತೇನೆ. ಪಾಲು ವಿಭಾಗ ಪತ್ರದ ಬಗ್ಗೆ ನಾನೇ ಹೇಳಿ ಬರೆಸಿರುತ್ತೇನೆ. ಪಾಲು ವಿಭಾಗ ಆಗುವಾಗ ನನಗೆ ಎಷ್ಟು ವರ್ಷ ಗೊತ್ತಿಲ್ಲ. ಸೌಭಾಗ್ಯಮ್ಮ ವಿಲ್ ಬರೆದಾಗ ನಾನು ಇರಲಿಲ್ಲ. ವಿಲ್ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ವೀರಯ್ಯ ಮತ್ತು ಕೊಟ್ರಯ್ಯ ಮಾವಂದಿರು ಎಂದರೆ ಸರಿ. ಹೀಗಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.